

# ಕೃಷಿಲೋಕದಲ್ಲಿ ಕಲಾ ಹಬ್ಬ

## ಭತ್ತದ ಗದ್ದೆಗಳಲ್ಲಿ ಇದೆಲ್ಲಿಂದ ಬಂದವೋ ದೈತ್ಯ ಪ್ರಾಣಿಗಳು!

■ ಜೀವನ್ ಶೆಟ್ಟಿ

ಭತ್ತದ ಪೈರು ಕಟಾವು ಮುಗಿಸಿದ ಮೇಲೆ ಉತ್ತರ ಜಪಾನಿನ ಗದ್ದೆಗಳಲ್ಲಿ ದೈತ್ಯಾಕಾರದ ವನ್ಯಜೀವಿಗಳ ದಾಳಿ ಯಾಗುತ್ತದೆ. ಆದರೆ ಅವು ಜೀವಂತ ಪ್ರಾಣಿಗಳಲ್ಲ. ಒಣ ಬೈಹುಲ್ಲುಗಳಿಂದ ರಚಿಸಿದ ನಿರ್ಜೀವ ಕಾಡು ಪ್ರಾಣಿಗಳ ಆಕೃತಿಗಳು!

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಆಚರಿಸುವ ಸುಗ್ಗಿ ಹಬ್ಬದಂತೆ ಉತ್ತರ ಜಪಾನಿನ ವಾರಾ ಕಲಾ ಹಬ್ಬ ವಿಶೇಷ ಅವಿಷ್ಕಾರ ಎನ್ನಲಾಗುತ್ತಿದೆ. ಈ ಕಲಾಪ್ರದರ್ಶನ ಸಂಪೂರ್ಣವಾಗಿ ಅಲ್ಲಿನ ರೈತರಿಗೆ ಮುಂದಿನ ಫಸಲಿಗೆ ಉತ್ತೇಜನ ನೀಡುವ ಉದ್ದೇಶವನ್ನು ಹೊಂದಿದೆ. ಕೊಯ್ಲು ಮುಗಿದ ಗದ್ದೆಗಳಲ್ಲಿ ಜಪಾನೀಯರು ಎಬ್ಬಿಸುವ ಕಲಾಕೃತಿಗಳು ಅವರ ದುಡಿಮೆ ಮತ್ತು ಜೀವನಪ್ರೀತಿಯನ್ನು ಎತ್ತಿ ತೋರಿಸುತ್ತವೆ.

ಹಿಂದೆ ಒಣ ಬೈಹುಲ್ಲುಗಳನ್ನು ಟಾಟಾಮಿ ಚಾಪೆ ಮುಂತಾದ ಗೃಹೋಪಯೋಗಿ ಸಾಮಗ್ರಿಗಳನ್ನು ಉತ್ಪಾದಿಸಲು ಜಪಾನೀಯರು ವ್ಯಾಪಕವಾಗಿ ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅದರ ಬದಲು ಮರ ಮತ್ತು ಪ್ಲಾಸ್ಟಿಕ್ ವಸ್ತುಗಳು ಆ ಜಾಗವನ್ನು ಆಕ್ರಮಿಸಿವೆ.

ಪ್ರತಿವರ್ಷ ಅಕ್ಟೋಬರ್ ತಿಂಗಳಲ್ಲಿ ಇಲ್ಲಿನ ಹೊಲಗದ್ದೆಗಳು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಕಲಾಪ್ರತಿಭಾ ಪ್ರದರ್ಶನಕ್ಕೆ ತಾಣಗಳಾಗುತ್ತವೆ. ನಿಗಾಟಾದ ಬೇಸಾಯ ಮುಗಿಸಿದ ಗದ್ದೆಗಳಲ್ಲಿ ಮುಸಾಶಿನೋ ಆರ್ಟ್ ಯೂನಿವರ್ಸಿಟಿಯ ಕಲಾ ವಿದ್ಯಾರ್ಥಿಗಳು ಒಟ್ಟಾಗಿ ಬೈಹುಲ್ಲು ಕಟ್ಟುಗಳಿಂದ 20–30 ಅಡಿಗಳ ಭಾರಿ ಗಾತ್ರದ ಮೊಸಳೆ, ಖಡ್ಗಮೃಗ, ಆನೆ, ಚಿಂಪಾಂಜಿ, ಸಿಂಹ, ಏಡಿ ಮುಂತಾದವುಗಳ ಪ್ರತಿಮೆಗಳನ್ನು ನಿರ್ಮಿಸುತ್ತಾರೆ. ಈ ಕಲಾ ಪ್ರದರ್ಶನವನ್ನು ನೋಡಲು ಸುತ್ತಮುತ್ತಲ ಹಳ್ಳಿ, ಪೇಟೆಗಳಿಂದ ನೂರಾರು ಜನರು ಬರುತ್ತಾರೆ.



ಮುಸಾಶಿನೋ ಆರ್ಟ್ ಯೂನಿವರ್ಸಿಟಿ ಆರಂಭವಾದದ್ದು 1962ರಲ್ಲಿ. ಪಶ್ಚಿಮ ಟೋಕಿಯೋದ ಈ ಯೂನಿವರ್ಸಿಟಿಯಲ್ಲಿ ಪ್ರತಿ ವರ್ಷ 6000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಾ ಪದವಿ ಪಡೆಯುತ್ತಿದ್ದಾರೆ. 2008ರಿಂದ ಪ್ರತಿವರ್ಷವೂ ಯೂನಿವರ್ಸಿಟಿಯ ವಿದ್ಯಾರ್ಥಿಗಳು ಈ ಕಲಾಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದಾರೆ.